# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:267**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ, ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರೇವಣಸಿದ್ದಪ್ಪ ಗವಣ್ಣವರ,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

ಶ್ರೀಮತಿ ಶಿರೀನಬಾನು ಎಂ ಖಾಜಿ,
(R R No : 217664)
ಪ್ರೀಯದರ್ಶಿನಿ ಕಾಲೋನಿ,
ವಿಲ್ಲತ್ ನಗರ, ಮಂಟೂರ ರೋಡ,
ಹುಬ್ಬಳ್ಳಿ.

..............**ದೂರುದಾರರು**.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-2,
ಹೆಸ್ಕಾಂ, ಹುಬ್ಬಳ್ಳಿ.

..................**ಪ್ರತಿವಾದಿಗಳು**.

**ಪೀಠಿಕೆ:**

1. ಶ್ರೀಮತಿ ಶಿರೀನಬಾನು ಎಂ ಖಾಜಿ, ಸ್ಥಾವರ ಸಂಖ್ಯೆ: 217664 ರ ನೇದ್ದ ಸ್ಥಾವರವು 0.50 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-2 ಜಕಾತಿಯಡಿಯಲ್ಲಿ ದಿನಾಂಕ:24-06-2010 ರಂದು ಸಂಪರ್ಕಿತಗೊಂಡಿದ್ದು, ಗ್ರಾಹಕರ ಪರವಾಗಿ ಶ್ರೀ ಮಹ್ಮದಹಾಸೀಮ್ ಅ ಖಾಜಿರವರು ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಬಾಕಿ ಇಡದೆ ಪ್ರತಿ ತಿಂಗಳು ಬಿಲ್ಲನ್ನು ತುಂಬುತ್ತಾ ಬಂದಿರುತ್ತವೆ. ಆದರೆ ಸದರಿ ಸ್ಥಾವರಕ್ಕೆ ಜೂನ್-2017 ರಿಂದ ಎಪ್ರೀಲ್-2019 & 10 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ 130 ಸರಾಸರಿ ಬಳಕೆ ಯುನಿಟ್‌ಗಳಿಗೆ ರೂ.15,500/-ಗಳ ಕಂದಾಯ ಕೊರತೆ ಮೊತ್ತವನ್ನು ಪಾವತಿಸುಂತೆ ನಮಗೆ ನೋಟೀಸ್ ನೀಡಿರುತ್ತಾರೆ. ಇದು ನಮ್ಮ ತಪ್ಪಿನಿಂದ ಆಗಿದ್ದಲ್ಲ ಸಂಬಂಧಿಸಿದ ಮಾಪಕ ಓದುಗ ಸಂಬಂಧಪಟ್ಟ ಶಾಖಾಧಿಕಾರಿಗಳಿಂದ ಆಗಿರುತ್ತದೆ. ಸದರಿ ಸ್ಥಾವರದ ಮಾಪಕವು ಸಹ ಸುಸ್ಥಿಯಲ್ಲಿರುತ್ತದೆ ಇಷ್ಟೇಲ್ಲ ಇದ್ದಾಗಲೂ ಬಾಕಿ ಮೊತ್ತ ಇದೆ ಎಂದು ಊಹೆಯ ಮೇರೆಗೆ ನೋಟೀಸ್ ಕಳುಹಿಸಿದರೆ ನಾವು ಏಕೆ ಹಣ ತುಂಬಬೇಕು. ಮಾನ್ಯರೆ ಸದರಿ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ನ್ಯಾಯವನ್ನು ಒದಗಿಸಿಕೊಡುವಂತೆ ಗ್ರಾಹಕರು ದಿನಾಂಕ:16-09-2022 ರಂದು ವೇದಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ
2. ಶ್ರೀಮತಿ ಶಿರೀನಬಾನು ಎಂ ಖಾಜಿ, ಸ್ಥಾವರ ಸಂಖ್ಯೆ: 217664 ರ ನೇದ್ದ ಸ್ಥಾವರವು 0.50 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-2 ಜಕಾತಿಯಡಿಯಲ್ಲಿ ದಿನಾಂಕ:24-06-2010 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಜೂನ್-2017 ರಿಂದ ಎಪ್ರೀಲ್-2019 & 10 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ 130 ಸರಾಸರಿ ಬಳಕೆ

.......2

ಯುನಿಟ್‌ಗಳಿಗೆ ರೂ.15,500/-ಗಳನ್ನು ಆಕರಿಸಿ ಕಚೇರಿಗೆ ವರದಿ ನೀಡಿದನ್ವಯ ಈ ಕಚೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2021-22/2884-85 ದಿನಾಂಕ:22-10-2021. ರಡಿಯಲ್ಲಿ ಗ್ರಾಹಕರಿಗೆ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಸದರಿ ಕಂದಾಯ ಕೊರತೆ ಮೊತ್ತವನ್ನು ಸದರಿ ಮೊತ್ತವನ್ನು ಆಕ್ಷೇಪಿಸಿ ತಕರಾರು ಅರ್ಜಿ ಸಲ್ಲಿಸಿದ್ದರಿಂದ ಸದರಿ ಆಕ್ಷೇಪಣೆ ಅರ್ಜಿಯನ್ವಯ ದಿನಾಂಕ:18-06-2022 ರಂದು ವಿಚಾರಣೆ ಕೈಗೊಳ್ಳಾಗಿತ್ತು. ಸದರಿ ವಿಚಾರಣೆಗೆ ಗ್ರಾಹಕರು ಹಾಜರಾಗಿದ್ದು, ವಿಚ್ಚರಣೆಯ ದಿನದಂದು ವಿದ್ಯುತ್ ಅದಾಲತ್ ಇದ್ದುದರಿಂದ ಕಚೇರಿ ಸಿಬ್ಬಂದಿಗೆ ಗ್ರಾಹಕರಿಂದ ಹೇಳಿಕೆ ಪಡೆದುಕೊಳ್ಳು ತಿಳಿಸಿ ಹೋಗಿದ್ದಿರುತ್ತದೆ. ವಿಚಾರಣೆಯ ದಿನದಂದು ಗ್ರಾಹಕರು ಕಂದಾಯ ಕೊರತೆಯ ಮೊತ್ತವನ್ನು ರೂ.4000/- ರಿಂದ 500/- ವರೆಗೆ ತುಂಬುವ ಹಾಗೆ ಮಾಡುವುದಾಗಿ ಇಲ್ಲಸಲ್ಲದ ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿರುತ್ತದೆ..

3. ಸದರಿ ಸ್ಥಾವರದ ಹಿಂಬಾಕಿಯೂ ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ ಮಾಪಕವು ದೋಷಪೂರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ.. ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತ ರೂ. 15500/-ಗಳನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿದ್ದು, ಈ ಕಚೇರಿ ಆದೇಶ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿಂ(ವಿ)/ಸ.ಲಡ/ಹಿಸ/ಬಿ4/2022-23/1784-86 ದಿನಾಂಕ:22-07-2022 ರಡಿಯಲ್ಲಿ ಹೊರಡಿಸಿದ ಆದೇಶವನ್ನು ಎತ್ತಿ ಹಿಡಿಯಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

4. ಸದರ ಪ್ರಕರಣವನ್ನು ದಿನಾಂಕ:04-11-2022 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| ಗ್ರಾಹಕರ ಪ್ರತಿನಿಧಿ | ನಿಗಮದ ಪರವಾಗಿ |
|---|---|
| ಶ್ರೀ ಮಹ್ಮದಹಾಸೀಮ್ ಅ ಖಾಜಿ | ಶ್ರೀ ಡಿ ಎಫ್ ಲಂಗೋಟಿ. |
| | ಸ.ಕಾ.ನಿ.ಇಂ(ವಿ) |
| | ಕಾ ಮತು ಪಾ ಶಹರ ಉಪವಿಭಾಗ-2, ಹುಬ್ಬಳ್ಳಿ. |

**ಶ್ರೀಮತಿ ಶಿರೀನಬಾನು ಎಂ ಖಾಜಿ, ಗ್ರಾಹಕರು (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ**

ಈ ಕೆಳಗೆ ಸಹಿ ಮಾಡಿದ ನಾನು ಶ್ರೀಮತಿ ಶಿರೀನಬಾನು ಎಂ ಖಾಜಿ, ಸಾ:ವಿಲ್ಲತನಗೆ ಹುಬ್ಬಳ್ಳಿ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ.

ನಮ್ಮ ಮನೆಯ ವಿದ್ಯುತ್ ಬಿಲ್ ಬಾಕಿ ಇದೆ ಎಂದು ಕೊಟ್ಟಿದ್ದು ಇರುತ್ತದೆ ವಿದ್ಯುತ್ ಮೀಟರ್ ನಂ (R.R.No-217664) ಇದ್ದು, ನಾವು ಪ್ರತಿ ತಿಂಗಳು ತಪ್ಪದೇ ಬಿಲ್ಲನ್ನು ತುಂಬಿರುತ್ತೇವೆ. ಆದರೆ ಜೂನ್-2017 ರಿಂದ ಎಪ್ರೀಲ್-2019 ರವರೆಗೆ ಮತ್ತು 10 ದಿವಸ ಬಿಲ್ಲನ್ನು ರೂ 15500/-ಗಳ ಬಾಕಿ ಇದೆ ಅಂತ ನಮಗೆ ನೋಟೀಸ್ ನೀಡಿರುತ್ತಾರೆ. ಆದರೆ ನಾವು ಯಾವುದೇ ಬಾಕಿ ಇಡದೆ ಪ್ರತಿ ತಿಂಗಳು ಬಿಲ್ಲನ್ನು ತುಂಬಿರುತ್ತೇವೆ. ಈ ಬಗ್ಗೆ ತಕರಾರು ಅರ್ಜಿಯನ್ನು ನಾವು ಮಾಲ್ಯಮಾಪನ ಅಧಿಕಾರಿಗಳಿಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಉಪ ವಿಭಾಗ-2 ಹೆಸ್ಕಾಂ, ಹುಬ್ಬಳ್ಳಿ ಇವರಿಗೆ ಸಲ್ಲಿಸಿದ್ದು, ಅವರು ನಮಗೆ ವಿಚಾರಣೆಗೆ ದಿನಾಂಕ:18-06-2022 ರಂದು ಕರೆದಿದ್ದು ಸದರಿ ದಿನಾಂಕದಂದು ನಾವು ವಿಚಾರಣೆಗೆ ಹಾಜರಾಗಿದ್ದು, ವಿಚಾರಣೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)(ಶ್ರೀ ಡಿ ಎಫ್ ಲಂಗೋಟಿ) ಇವರು ಹಾಜರ ಆಗದೇ ಇಬ್ಬರು ಗುಮಾಸ್ತರಿಗೆ ಒಪ್ಪಿಸಿ ಹೋಗಿರುತ್ತಾರೆ ಸದರಿ ಗುಮಾಸ್ತರು ಈ ಮೊತ್ತವನ್ನು ರೂ 4000/- ರಿಂದ ರೂ. 5000/- ವರೆಗೆ ತುಂಬುವ ಹಾಗೆ ಮಾಡುತ್ತೇವೆ ಎಂದು ಹೇಳಿದರು ಅದಕ್ಕೆ ನಮ್ಮ ಒಪ್ಪಿಗೆ ನಾವು ಸೂಚಿಸಿರುವುದಿಲ್ಲ. ನಮಗೆ ದುಡ್ಡು ತುಂಬಲು ಆಗುವುದಿಲ್ಲ ಇದರಲ್ಲಿ ನಮ್ಮ ತಪ್ಪು ಇರುವುದಿಲ್ಲ ಇದೆಲ್ಲ ನಿಮ್ಮ ತಪ್ಪಿನಿಂದ ಆಗಿದೆ ಎಂದು ಹೇಳಿದ್ದಕ್ಕೆ ನಿಮಗೆ ಪೂರ್ಣ ಹಣ ತುಂಬುವ ಹಾಗೆ ಮಾಡುತ್ತೇವೆ ಎಂದು ನಮಗೆ ಬೆದರಿಕೆ ಹಾಕಿದ್ದಾರೆ ಅದರ ಪ್ರಕಾರ ಪೂರ್ಣ ಹಣ ತುಂಬುವ ಆದೇಶವನ್ನು ಮಾಡಿರುತ್ತಾರೆ. ಸದರಿ ಆದೇಶದಲ್ಲಿ ಗ್ರಾಹಕರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಕಂದಾಯ ಕೊರತೆ ಮೊತ್ತ ರೂ,15500/- 15 ದಿನಗಳೊಳಗೆ ಗ್ರಾಹಕರು ಬಡ್ಡಿ ಸಮೇತ ತುಂಬಬೇಕು ಎಂದು ಆದೇಶ ಮಾಡಿರುತ್ತಾರೆ.

ಸದರಿ ಆದೇಶಕ್ಕೆ ನಾವುಗಳು ಮತ್ತೆ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಚೇರಿ ತಬೀಬ್‌ಲ್ಯಾಂಡ್ ಹುಬ್ಬಳ್ಳಿರವರಿಗೆ ಸದರಿ ವಿಷಯ ಹಾಗೂ ಆದೇಶದ ಬಗ್ಗೆ ಅರ್ಜಿ ಮೂಲಕ ತಿಳಿಸಲಾಗಿದೆ. ಇವರು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಉಪ ವಿಭಾಗ-2 ಹುಬ್ಬಳ್ಳಿ ಇವರಿಗೆ ತಕರಾರು ಅರ್ಜಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

......3

ಹೆಸ್ಕಾಂ, ಸಿಬ್ಬಂದಿಗಳು ಬಿಲ್ ನೀಡುವಾಗ ಮೀಟರ್ ರೀಡಿಂಗ್ ನೋಡಿ ಬಿಲ್ಲನ್ನು ನೀಡುತ್ತಾ ಬಂದಿದ್ದಾರೆ ಹಾಗೂ ಮಾರ್ಚ ತಿಂಗಳಲ್ಲಿ 2022 ರಲ್ಲಿ ಮೀಟರ್ ರೀಡಿಂಗ್ ನೋಡಿ ಬಿಲ್ಲನ್ನು ಕೊಟ್ಟಿದ್ದು, ಅದರಲ್ಲಿ ರೂ 1550/- ಹಿಂದಿನ ಬಾಕಿ ಎಂದು ತೋರಿಸಿದ್ದಾರೆ 2019 ರಿಂದ 2022 ರವರೆಗೆ ಏಕೆ ನಮ್ಮ ಗಮನಕ್ಕೆ ತಂದಿರುವುದಿಲ್ಲ ಸದರಿ R.R.No-217664 ಇರುವ ಮನೆ ಮಹಡಿ ಮನೆ ಇದೆ. ಸದರಿ ಮೀಟರ್ ಮೇಲಿನ ಮನೆಯನ್ನು ಸಂಬಂಧಿಸಿದ ಸದರಿ ಮನೆಯಲ್ಲಿ ಹೆಚ್ಚಿಗೆ ವಿದ್ಯುತ್ ಉಪಯೋಗಿಸುವುದಿಲ್ಲ ಏಕೆಂದರೆ ಅಲ್ಲಿ ಯಾರೂ ಇರುವುದಿಲ್ಲ ನಾವೆಲ್ಲ ಕೆಳಗಡೆಯ ಮನೆಯಲ್ಲಿ ಇರುತ್ತೇವೆ ಮೇಲಿನ ಮನೆ ಖಾಲಿ ಇರುತ್ತದೆ. ಮಾರ್ಚ-2017 ರಿಂದ ಮೇ-2017 ರ ವರೆಗೆ ಮಕ್ಕಳ ಪರೀಕ್ಷೆ ಇದ್ದ ಕಾರಣಕ್ಕೆ ಮಕ್ಕಳೆಲ್ಲಿ ವಿದ್ಯಾಭ್ಯಾಸಕ್ಕಾಗಿ ಸದರಿ ಮೇಲಿನ ಮನೆಯಲ್ಲಿ ವಿದ್ಯುತ್ ಬಳಕೆ ಮಾಡಿರುತ್ತಾರೆ. ಅದೇ ಒಂದು ಆಧಾರದ ಮೇಲೆ ಜೂನ್-2017 ರಿಂದ ಎಪ್ರೀಲ್-2019 ರ ವರೆಗೂ ಅಷ್ಟೆ ವಿದ್ಯುತ್ ಬಳಕೆಯಾಗುತ್ತದೆ ಎಂದು ಊಹೆ ಮಾಡಿ ನಮಗೆ ಬಾಕಿ ಹಣ ತುಂಬಲು ನೋಟಿಸನ್ನು ಮಾರ್ಚ-2022 ರಲ್ಲಿ ನೀಡಿರುತ್ತಾರೆ. ಹಿಂದಿನ ಮೀಟರ್ ಡಿಸ್‌ಪ್ಲೆ ಹೋಗಿದೆ ಎಂದು ಕೇವಲ 15 ದಿನದಲ್ಲಿ ಮೀಟರ್ ಬದಲಿಸಿರುವಿರಿ ಮೀಟರ್ ರೀಡಿಂಗ್ ನೋಡಿ ಬಿಲ್ ನೀಡಿದ ಮೇಲೆ ಬಿಲ್ ತುಂಬದೇ ಇದ್ದಲ್ಲಿ ಎರಡು-ಮೂರು ತಿಂಗಳಲ್ಲಿ ವಿದ್ಯುತ್ ಸಂಪರ್ಕ ನಿಲುಗಡೆ ಮಾಡುವಿರಿ ತಾವುಗಳು ಎರಡು ವರ್ಷ ಹೇಗೆ ಸುಮ್ಮನೀದ್ದಿರಿ ಮನೆ ಖಾಲಿ ಇದ್ದ ಬಗ್ಗೆ ತಿಳಿಸದೇ ಹೊದರೆ ವಿದ್ಯುತ್ ಬಳಕೆ ಮಾಡದೇ ಹೋದರೂ ಹಿಂದಿನ ಮಿಟರ್ ವಿದ್ಯುತ್ ಬಳಕೆಯ ಆಧಾರ ಮೇಲೆ ಸರಾಸರಿ ಬಿಲ್ಲನ್ನು ಪಾವತಿ ಮಾಡಬೇಕೇ? ಇದು ಯಾವ ನ್ಯಾಯ.

ಸದ್ಯ ಇರುವ ಮೀಟರ್ ತಪಾಸಣೆ ಮಾಡಲಾಗಿದೆ ಹಾಗೂ ಸದರಿ ಮೀಟರ್ ಸುಸ್ಥಿಯಲ್ಲಿದೆ ಎಂದು ವರದಿ ಇದೆ ಹಾಗೂ ಎಪ್ರೀಲ್-2017 ರಿಂದ ಅಕ್ಟೋಬರ್-2019 ರವರೆಗೆ ವಿದ್ಯುತ್ ಬಳಕೆಯ ಸ್ಟೇಟ್‌ಮೆಂಟ್ ಕಚೇರಿಯಿಂದ ಪಡೆದಿದ್ದು ಪ್ರತಿ ತಿಂಗಳು ನಾರ್ಮಲ್ ಇದ್ದ ಬಗ್ಗೆ ತಿಳಿಸಿರುತ್ತಾರೆ. ಇಷ್ಟೆಲ್ಲ ಇದ್ದಾಗಲೂ ಬಾಕಿ ಮೊತ್ತ ಇದೆ ಎಂದು ಊಹೆಯ ಮೇರೆಗೆ ನೋಟೀಸ್ ಕಳುಹಿಸಿದರೆ ನಾವು ಏಕೆ ಹೆಚ್ಚಿನ ಹಣ ತುಂಬಬೇಕು.

ಮಾನ್ಯರೆ, ಈ ಮೇಲಿನ ಎಲ್ಲ ವಿವರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ನಮಗೆ ನ್ಯಾಯವನ್ನು ಒದಗಿಸಿಕೊಬೇಕೆಂದು ತಮ್ಮಲ್ಲಿ ವಿನಂತಿಸಕೊಳ್ಳುತ್ತೇನೆ.

## ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಶಹರ ಉಪವಿಭಾಗ-2 ಹೆಸ್ಕಾಂ ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ:

ಶ್ರೀಮತಿ.ಶಿರೀನಬಾನು ಎಂ ಖಾಜಿ ಇವರ ಸ್ಥಾವರ ಸಂಖ್ಯೆ: 217664 ರ ಮಾಪಕವು ಎಂ.ಎನ್.ಆರ್ ಆಗಿದ್ದು, ಬಳಕೆ ದಾಖಲಾಗದ ಅವಧಿಗೆ ಕಂದಾಯ ಕೊರತೆ ಮೊತ್ತ ಆಕರಣೆ ಮಾಡಿರುವುದಕ್ಕೆ ಮಾನ್ಯ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ಧಾರವಾಡ ಜಿಲ್ಲೆ ರವರಲ್ಲಿ ಸಲ್ಲಿಸಿದ ದೂರಿನ ಕುರಿತಾದ ಪ್ಯಾರಾ ವೈಸ್ ವಿವರಗಳನ್ನು ಈ ಕೆಳಗಿನಂತೆ ಸಲ್ಲಿಸಲಾಗಿದೆ.

| | | |
|---|---|---|
| ಸ್ಥಾವರ ಸಂಖ್ಯೆ | : | 217664/ 8191352000 |
| ಹೆಸರು ಮತ್ತು ವಿಳಾಸ | : | ಶ್ರೀಮತಿ.ಶಿರೀನಬಾನು ಎಂ ಖಾಜಿ |
| ಮಂಜೂರಾದ ಭಾರ | : | 0.50 KW |
| ಸಂಪರ್ಕ ದಿನಾಂಕ | : | 24-06-2010 |
| ಜಕಾತಿ | : | LT2 |
| ವಿವಾದಿತ ಮೊತ್ತ | : | 15500/- |
| ಕಂದಾಯ ಕೊರತೆಗೆ ಕಾರಣ | : | ಮಾಪಕವು ಎಂ.ಎನ್.ಆರ್ ಆಗಿದ್ದರಿಂದ |
| ವಿದ್ಯುತ್ ಬಳಕೆ ದಾಖಲಾಗದ ಅವಧಿ | : | ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳವರೆಗೆ |

**ಪ್ರಕರಣದ ಸಂಕ್ಷಿಪ್ತ ಮಾಹಿತಿ**

1) ವಿದ್ಯುತ್ ಸ್ಥಾವರ ಸಂಖ್ಯೆ: 217664 ರ ನೋಂದಾಯಿತ ವಿದ್ಯುತ್ ಗ್ರಾಹಕರ ಹೆಸರು ಶ್ರೀಮತಿ.ಶಿರೀನಬಾನು ಎಂ ಖಾಜಿ ಇದ್ದು, ಎಲ್.ಟಿ-2 ಜಕಾತಿಯಲ್ಲಿ 0.50 KW ಭಾರಕ್ಕೆ ಮಂಜೂರಾತಿ ಹೊಂದಿರುತ್ತದೆ.
2) ಸದರಿ ಸ್ಥಾವರವು ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳವರೆಗೆ ಎಂ.ಎನ್.ಆರ್ ಆಗಿದ್ದರಿಂದ, ಸದರಿ ಅವಧಿಯಲ್ಲಿ ಬಳಕೆ ದಾಖಲಾಗಿರುವುದಿಲ್ಲಾ.

......4

3) ಆಂತರಿಕ ಪರಿಶೋಧನೆ ವಿಭಾಗದವರು ಸದರಿ ಸ್ಥಾವರವನ್ನು ಪರಿಶೀಲನೆ ಮಾಡಿ, ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳು ಬಳಕೆ ದಾಖಲಾಗದ ಅವಧಿಗೆ 130 ಸರಾಸರಿ ಬಳಕೆ ಯುನಿಟ್‌ಗಳಿಗೆ ರೂ.15500/- ಗಳ ಕಂದಾಯ ಕೊರತೆ ಮೊತ್ತವನ್ನು ಲೆಕ್ಕಿಕರಿಸಿ ಈ ಕಛೇರಿಗೆ ವರದಿ ನೀಡಿರುತ್ತಾರೆ.
4) ದೋಷಪೂರಿತ ಮಾಪಕವನ್ನು ಬದಲಾಯಿಸಿದ ದಿನಾಂಕ: 25-04-2019.
5) ಸದರಿ ವರದಿಯನ್ವಯ ಕಂದಾಯ ಕೊರತೆ ಮೊತ್ತ ರೂ.15500/- ಗಳನ್ನು ತುಂಬಲು ನೀಡಿದ ನೋಟೀಸ್ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2021-22/2884-85, ದಿನಾಂಕ:22-10-2021

**ಶ್ರೀಮತಿ.ಶಿರೀನಬಾನು ಎಂ ಖಾಜಿ Vs ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ), ನಗರ ಉಪವಿಭಾಗ-2 ಹೆಸ್ಕಾಂ, ಹುಬ್ಬಳ್ಳಿ. ಪ್ರಕರಣ ಸಂಖ್ಯೆ: CGRF-267/2022 ಕ್ಕೆ ಸಂಬಂಧಿಸಿದಂತೆ ನಮ್ಮ ವಿವರಣೆ ಈ ಕೆಳಗಿನಂತಿರುತ್ತದೆ.**

**<u>ಪ್ಯಾರಾ ವೈಸ್ ಕಮೆಂಟ್ಸ್:</u>**

1) ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳ ಅವಧಿಯಲ್ಲಿ ಕಡಿಮೆ ಬಳಕೆ ದಾಖಲಾಗುತ್ತಾ ಬಂದು ಮಾಪಕವು ಎಮ್.ಎನ್.ಆರ್ ಆಗಿರುತ್ತದೆ. ಸದರಿ ಅವಧಿಗೆ ಆಂತರಿಕ ಪರಿಶೋಧನೆಯವರು ಕಂದಾಯ ಕೊರತೆ ಮೊತ್ತ ರೂ.15500/- ಗಳನ್ನು ಆಕರಿಸಿ ಈ ಕಛೇರಿಗೆ ವರದಿ ನೀಡಿದರನ್ವಯ ಈ ಕಛೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2021-22/2884-85, ದಿನಾಂಕ: 22-10-2021 ರಡಿಯಲ್ಲಿ ಗ್ರಾಹಕರಿಗೆ ನೋಟಿಸ್ ಜಾರಿ ಮಾಡಲಾಗಿರುತ್ತದೆ.
2) ಸದರಿ ನೋಟೀಸ್‌ಗೆ ಗ್ರಾಹಕರು ಯಾವುದೇ ತಕರಾರು ಸಲ್ಲಿಸದ ಕಾರಣ ಮಾರ್ಚ್-2022 ರ ಮಾಹೆಯಲ್ಲಿ ಸ್ಥಾವರಕ್ಕೆ ಬೇಡಿಕೆ ಆಕರಿಸಲಾಗಿರುತ್ತದೆ. ಬಿಲ್ಲಿನಲ್ಲಿ ಕಂದಾಯ ಕೊರತೆ ಮೊತ್ತ ಬೇಡಿಕೆಯಾದ ನಂತರ ಅಂದರೆ ದಿನಾಂಕ: 19-03-2022 ರಂದು ಕಂದಾಯ ಕೊರತೆ ಮೊತ್ತವನ್ನು ಆಕ್ಷೇಪಿಸಿ ತಕರಾರು ಅರ್ಜಿ ಸಲ್ಲಿಸಿದ್ದರಿಂದ, ಸದರಿ ಆಕ್ಷೇಪಣಾ ಅರ್ಜಿಯನ್ವಯ ದಿನಾಂಕ: 18-06-2022 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು(ವಿ), ನಗರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿ ರವರ ಕಛೇರಿಯಲ್ಲಿ ವಿಚಾರಣೆ ಕೈಗೊಳ್ಳಲಾಗಿತ್ತು. ಸದರಿ ವಿಚಾರಣೆಗೆ ಗ್ರಾಹಕರು ಹಾಜರಾಗಿದ್ದು, ವಿಚಾರಣೆ ದಿನದಂದು ವಿದ್ಯುತ್ ಅದಾಲತ್ ಇದ್ದುದ್ದರಿಂದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯ(ವಿ) ರವರು ಗ್ರಾಹಕರಿಂದ ಹೇಳಿಕೆ ಪಡೆದುಕೊಳ್ಳಲು ಸಿಬ್ಬಂದಿಗೆ ತಿಳಿಸಿ ಹೋಗಿರುತ್ತಾರೆ.
3) ಸದರಿ ದಿನದಂದು ಗ್ರಾಹಕರ ಪರವಾಗಿ ಶ್ರೀ.ಮುಸ್ತಾಕ್ ಅಹಮ್ಮದ್.ಅ.ಖಾಜಿ, ಸಾ|| ಮಿಲ್ಲತ್ ನಗರ, ಮಂಟೂರ ರೋಡ್, ಹುಬ್ಬಳ್ಳಿ ಇವರು ಈ ಕೆಳಗಿನಂತೆ ಹೇಳಿಕೆ ನೀಡಿರುತ್ತಾರೆ.

ನಾನು ಶ್ರೀ.ಮುಸ್ತಾಕ್ ಅಹಮ್ಮದ ಅ ಖಾಜಿ ನಮ್ಮ ಮನೆಯ ವಿದ್ಯುತ್ ಬಿಲ್ ಹೆಚ್ಚಿಗೆ ಮಾಡಿದ ಬಿಲ್ ಕೊಟ್ಟಿದ್ದು ಇರುತ್ತದೆ. ಮೀಟರ್ ನಂಬರ್: 217664 ಇದ್ದು, ನಾವು ಪ್ರತಿ ತಿಂಗಳು ಬಿಲ್ ತುಂಬಿದ್ದು ಇರುತ್ತದೆ. ಆದರೆ ನೀವು ಜೂನ್-2017ರಿಂದ ಏಪ್ರೀಲ್-2019 ಮತ್ತು 10 ದಿನದ ಬಿಲ್ ರೂ.15500/-ಗಳು ಬಾಕಿ ಇದೆ ಎಂದು ನಮಗೆ ನೋಟೀಸ್ ನೀಡಿದ್ದೀರಿ. ರದರಿ ನೋಟೀಸ್ ನಮಗೆ ತಲುಪಿರುವುದಿಲ್ಲ ಆ ನೋಟೀಸ್‌ನ್ನು ದಿನಾಂಕ: 18-06-2022 ರಂದು ಕಛೇರಿಯಲ್ಲಿ ಸ್ವಿಕರಿಸಿರುತ್ತೇವೆ. ಆದರೆ ನಾವು ಯಾವುದೇ ಬಾಕಿ ಇಡದೇ ಬಿಲ್ಲನ್ನು ತುಂಬಿರುತ್ತೇವೆ. ನಾವು ತುಂಬಿದ ಬಿಲ್ ರಶೀದಿಗಳು ಇರುತ್ತವೆ. ತಾವುಗಳು ವಿದ್ಯುತ್ ಬಿಲ್ಲನ್ನು ಬರೆಯುವಾಗ ಮೀಟರ್ ರೀಡಿಂಗ್‌ನ್ನು ನೋಡಿ ಬಿಲ್ಲನ್ನು ಕೊಡುತ್ತಿದ್ದೀರಿ.ನಾವು ಆ ಪ್ರಕಾರ ಪ್ರತಿ ತಿಂಗಳು ಬಿಲ್ಲನ್ನು ತುಂಬಿರುತ್ತೇವೆ. ಯಾವುದೇ ಬಾಕಿ ಇರುವುದಿಲ್ಲ. ನೀವು ಮಾರ್ಚ್-2022 ರಂದು ಮೀಟರ್ ರೀಡಿಂಗ್ ನೋಡಿ ಬಿಲ್ ಕೊಟ್ಟ ನಂತರ ನಾವು ನಿಮ್ಮ ಆಫೀಸ್‌ಗೆ ಬಂದು ಕೇಳಿದಾಗ ನೀವು ನಮಗೆ ಆಗ ನೋಟೀಸ್ ಕೊಟ್ಟಿದ್ದು ಇರುತ್ತದೆ. ತಾವು 2 ವರ್ಷ ತನಕ ನಮಗೆ ಯಾವುದೇ ಸೂಚನೆ ಕೊಟ್ಟಿರುವುದಿಲ್ಲ. ನಾವು ಸಾಮಾನ್ಯ ಕೂಲಿ ಕಾರ್ಮಿಕರಿದ್ದು, ಇಷ್ಟೊಂದು ಮೊತ್ತದ ವಿದ್ಯುತ್ ದಂಡದ ಮೊತ್ತವನ್ನು ತುಂಬಲು ಅಸಾಧ್ಯವಿದ್ದು, ದಂಡದ ಮೊತ್ತವನ್ನು ರದ್ದುಗೊಳಿಸಲು ಈ ಮೂಲಕ ಕೇಳೀಕೊಳ್ಳುತ್ತೇನೆಂದು ಹೇಳಿಕೆ ನೀಡಿರುತ್ತಾರೆ.

ಸದರಿ ಸಮಯದಲ್ಲಿ ಗ್ರಾಹಕರಿಗೆ ಕಂದಾಯ ಕೊರತೆ ಮೊತ್ತವನ್ನು ರೂ.4000/- ರಿಂದ 5000/- ವರಗೆ ತುಂಬುವ ಹಾಗೆ ಮಾಡುವುದಾಗಿ ಗ್ರಾಹಕರು ಒಪ್ಪದಿದ್ದಾಗ ಗ್ರಾಹಕರಿಗೆ ಬೆದರಿಕೆ ಹಾಕಿ ಪೂರ್ಣ ಹಣ ತುಂಬುವ ಹಾಗೆ ಮಾಡುತ್ತೇವೆ ಎಂದು ಇಲ್ಲಸಲ್ಲದ ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

4) ಮಾಪಕ ಬದಲಾವಣೆಗೊಂಡ ನಂತರವು ಕೂಡ ಬಳಕೆ ಹೆಚ್ಚು ಕಡಿಮೆ ದಾಖಲಾಗಿದ್ದರಿಂದ, ಗ್ರಾಹಕರಿಗೆ ದೂರವಾಣಿ ಮುಖೇನ ಕರೆ ಮಾಡಿ ಮನೆ ಖಾಲಿ ಇದೆಯಾ ಅಥವಾ ವಾಸವಿರುವಿರಾ ಎಂದು ವಿಚಾರಿಸಿದಾಗ ಮನೆ ಖಾಲಿ ಇರುವುದಿಲ್ಲಾ ವಾಸವಿರುತ್ತೇವೆ ಎಂದು ಹೇಳಿದ್ದರಿಂದ, ವಾಸವಿದ್ದಾಗಲೂ ಬಳಕೆ ಕಡಿಮೆ ದಾಖಲಾಗುತ್ತಿರುವುದರಿಂದ ಅನುಮಾನಗೊಂಡು, ಸದರಿ ಸ್ಥಾವರವನ್ನು ಮಾಪಕ ತಪಾಸಣೆಗೆ ಎಲ್.ಟಿ.ಎಂ.ಆರ್ ಉಪವಿಭಾಗದವರಿಂದ ತಪಾಸಣೆ ಮಾಡಲು ದಿನಾಂಕ:08-07-2022 ರಂದು ಈ ಕಛೇರಿ ಪತ್ರ ಸಂಖ್ಯೆ: 1547 ರಡಿಯಲ್ಲಿ ಪತ್ರ ಬರೆಯಲಾಗಿತ್ತು. ಮಾಪಕ ತಪಾಸಣಾ ಉಪವಿಭಾಗದವರ ಸಧ್ಯ ಇರುವ ಮಾಪಕವು ಸುಸ್ಥಿತಿಯಲ್ಲಿರುವುದಾಗಿ ಈ ಕಛೇರಿಗೆ ತಿಳಿಸಿರುತ್ತಾರೆ.

......5

5) ಸ್ಥಾವರ ಸಂಖ್ಯೆ: 217664 ರ ಕಂದಾಯ ಖಾತೆ ಹಾಗೂ ಲೆಕ್ಕಾಚಾರದ ಪ್ರತಿಯನ್ನು ಪರಿಶೀಲಿಸಿ ನೋಡಲಾಗಿ, ಸರಾಸರಿ 100 ಕ್ಕಿಂತ ಹೆಚ್ಚು ಬಳಕೆ ಯುನಿಟ್‌ಗಳು ದಾಖಲಾಗಿದ್ದು, ಜೂನ್-2017 ರಿಂದ ಏಪ್ರೀಲ್-2019 ಮತ್ತು 10 ದಿನದ ಅವಧಿಯಲ್ಲಿ ಬಳಕೆ ಇಲ್ಲದಿರುವುದು ಕಂಡುಬಂದಿರುತ್ತದೆ ನಂತರ ಮಾಪಕ ಬದಲಾವಣೆಯಾಗಿರುತ್ತದೆ. ಸದರಿ ಅವಧಿಯಲ್ಲಿ ಬಳಕೆ ಇಲ್ಲದಿರುವ ಬಗ್ಗೆ ಆಗಲೀ ಅಥವಾ ಮನೆ ಖಾಲಿ ಇದ್ದ ಬಗ್ಗೆ ಆಗಲೀ ಗ್ರಾಹಕರು ಯಾವುದೇ ದಾಖಲಾತಿಗಳನ್ನು ಕೂಡ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಮಾಪಕವು ದೋಷಪೂರಿತವಾಗಿರುವುದು ಖಚಿತವಾಗಿದ್ದು, ಈಗಾಗಲೇ ಆಂತರಿಕ ಪರಿಶೋಧನೆ ವಿಭಾಗದವರು ಮಾರ್ಚ್-2017 ರಿಂದ ಮೇ-2017 ರ ಅವಧಿಯಲ್ಲಿ ದಾಖಲಾದ ಬಳಕೆ 103+187+100=390/3=130 ಸರಾಸರಿ ಯುನಿಟ್‌ಗಳ ಆಧಾರದ ಮೇಲೆ ಆಕರಿಸಿದ ಕಂದಾಯ ಕೊರತೆ ಮೊತ್ತ ರೂ.15500/- ಗಳು ಸರಿಯಾಗಿದ್ದು, ಗ್ರಾಹಕರು ಪಾವತಿಬೇಕೆಂದು ಈ ಕಛೇರಿ ಆದೇಶ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ ಸ.ಲೆ/ ಹಿಸ/ಬಿ4/2022-23/1784-86, ದಿನಾಂಕ:22-07-2022 ರಡಿಯಲ್ಲಿ ಆದೇಶಿಸಲಾಗಿರುತ್ತದೆ.

## ಪ್ರಾರ್ಥನೆ

**ದಯಾಪರರವರಲ್ಲಿ ಪ್ರಾರ್ಥಿಸುವುದೇನೆಂದರೆ ಸದರಿ ಕಂದಾಯ ಕೊರತೆ ಮೊತ್ತವು ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ, ಮಾಪಕವು ದೋಷಪೂರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತ ರೂ.15500/- ಗಳನ್ನು ವನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿರುತ್ತಾರೆ. ಆದ್ದರಿಂದ ಮೇಲಿನ ಪ್ರಕರಣದಲ್ಲಿನ ಆದೇಶವನ್ನು ಪರಿಗಣಿಸಿ, ಆದೇಶ ಸಂಖ್ಯೆ: ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ ಹಿಸ/ಬಿ4/2022-23/1784-86, ದಿನಾಂಕ: 22-07-2022 ರಡಿಯಲ್ಲಿ ಹೊರಡಿಸಿದ ಆದೇಶವನ್ನು ಎತ್ತಿ ಹಿಡಿಯಬೇಕೆಂಬ ನಮ್ಮ ಪ್ರಾರ್ಥನೆಯನ್ನು ಪುರಸ್ಕರಿಸಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.**

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀಮತಿ ಶಿರೀನಬಾನು ಎಂ ಖಾಜಿ, ಸ್ಥಾವರ ಸಂಖ್ಯೆ: 217664 ರ ನೇದ್ದ ಸ್ಥಾವರವು 0.50 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-2 ಜಕಾತಿಯಡಿಯಲ್ಲಿ ದಿನಾಂಕ:24-06-2010 ರಂದು ಸಂಪರ್ಕಿತಗೊಂಡಿದ್ದು, ಗ್ರಾಹಕರ ಪರವಾಗಿ ಶ್ರೀ ಮಹ್ಮದಹಾಸೀಮ್ ಅ ಖಾಜಿರವರು ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ನಾವು ಯಾವುದೇ ಬಾಕಿ ಇಡದೆ ಪ್ರತಿ ತಿಂಗಳು ಬಿಲ್ಲನ್ನು ತುಂಬುತ್ತಾ ಬಂದಿರುತ್ತವೆ. ಆದರೆ ಸದರಿ ಸ್ಥಾವರಕ್ಕೆ ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ 130 ಸರಾಸರಿ ಬಳಕೆ ಯುನಿಟ್‌ಗಳಿಗೆ ರೂ.15,500/-ಗಳ ಕಂದಾಯ ಕೊರತೆ ಮೊತ್ತವನ್ನು ಪಾವತಿಸುಂತೆ ನಮಗೆ ನೋಟೀಸ್ ನೀಡಿರುವುದು ಕಂಡು ಬರುತ್ತದೆ. ಇದು ನಮ್ಮ ತಪ್ಪಿನಿಂದ ಆಗಿದ್ದಲ್ಲ ಸಂಬಂಧಿಸಿದ ಮಾಪಕ ಓದುಗ ಸಂಬಂಧಪಟ್ಟ ಶಾಖಾಧಿಕಾರಿಗಳಿಂದ ಆಗಿರುತ್ತದೆ. ಸದರಿ ಸ್ಥಾವರದ ಮಾಪಕವು ಸಹ ಸುಸ್ಥಿಯಲ್ಲಿರುತ್ತದೆ ಇಷ್ಟೆಲ್ಲ ಇದ್ದಾಗಲೂ ಬಾಕಿ ಮೊತ್ತ ಇದೆ ಎಂದು ಊಹೆಯ ಮೇರೆಗೆ ನೋಟೀಸ್ ಕಳುಹಿಸಿದರೆ ನಾವು ಏಕೆ ಹಣ ತುಂಬಬೇಕು. ಮಾನ್ಯರೆ ಸದರಿ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ನ್ಯಾಯವನ್ನು ಒದಗಿಸಿಕೊಡುವಂತೆ ಗ್ರಾಹಕರು ದಿನಾಂಕ:16-09-2022 ರಂದು ವೇದಿಕೆಗೆ ಅರ್ಜಿಸಲ್ಲಿಸಿರುವುದು ಕಂಡು ಬರುತ್ತದೆ.

2. ಶ್ರೀಮತಿ ಶಿರೀನಬಾನು ಎಂ ಖಾಜಿ, ಸ್ಥಾವರ ಸಂಖ್ಯೆ: 217664 ರ ನೇದ್ದ ಸ್ಥಾವರವು 0.50 ಕಿ.ವ್ಯಾ. ವಿದ್ಯುತ್ ಮಂಜೂರಾತಿ ಭಾರದೊಂದಿಗೆ ಎಲ್.ಟಿ-2 ಜಕಾತಿಯಡಿಯಲ್ಲಿ ದಿನಾಂಕ:24-06-2010 ರಂದು ಸಂಪರ್ಕಿತಗೊಂಡಿದ್ದಿರುತ್ತದೆ. ಜೂನ್-2017 ರಿಂದ ಏಪ್ರೀಲ್-2019 & 10 ದಿನಗಳಿಗೆ ಎಮ್.ಎನ್.ಆರ್ ಎಂದು ಪರಿಗಣಿಸಿ ಆಂತರಿಕ ಪರಿಶೋಧನೆಯವರು ಸದರಿ ಅವಧಿಗೆ 130 ಸರಾಸರಿ ಬಳಕೆ ಯುನಿಟ್‌ಗಳಿಗೆ ರೂ.15,500/-ಗಳನ್ನು ಆಕರಿಸಿ ಕಚೇರಿಗೆ ವರದಿ ನೀಡಿದನ್ವಯ ಈ ಕಚೇರಿ ಪ್ರೋವಿಜಿನಲ್ ನೋಟೀಸ್ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿ.ಇಂ(ವಿ)/ಸ.ಲೆ/ಹಿಸ/ಬಿ4/2021-22/2884-85 ದಿನಾಂಕ:22-10-2021. ರಡಿಯಲ್ಲಿ ಗ್ರಾಹಕರಿಗೆ ನೋಟೀಸ್ ಜಾರಿ ಮಾಡಿರುವುದು ಕಂಡು ಬರುತ್ತದೆ. ಸದರಿ ಕಂದಾಯ ಕೊರತೆ ಮೊತ್ತವನ್ನು ಸದರಿ ಮೊತ್ತವನ್ನು ಆಕ್ಷೇಪಿಸಿ ತಕರಾರು ಅರ್ಜಿ ಸಲ್ಲಿಸಿದ್ದಿರಿಂದ ಸದರಿ ಆಕ್ಷೇಪಣೆ ಅರ್ಜಿಯನ್ವಯ ದಿನಾಂಕ:18-06-2022 ರಂದು ವಿಚಾರಣೆ ಕೈಗೊಳ್ಳಾಗಿತ್ತು. ಸದರಿ ವಿಚಾರಣೆಗೆ ಗ್ರಾಹಕರು ಹಾಜರಾಗಿದ್ದು, ವಿಚಾರಣೆಯ ದಿನದಂದು ವಿದ್ಯುತ್ ಅದಾಲತ್ ಇದ್ದುದರಿಂದ

......6

ಕಚೇರಿ ಸಿಬ್ಬಂದಿಗೆ ಗ್ರಾಹಕರಿಂದ ಹೇಳಿಕೆ ಪಡೆದುಕೊಳ್ಳು ತಿಳಿಸಿ ಹೋಗಿದ್ದಿರುತ್ತದೆ. ವಿಚಾರಣೆಯ ದಿನದಂದು ಗ್ರಾಹಕರು ಕಂದಾಯ ಕೊರತೆಯ ಮೊತ್ತವನ್ನು ರೂ.4000/- ರಿಂದ 500/- ವರೆಗೆ ತುಂಬುವ ಹಾಗೆ ಮಾಡುವುದಾಗಿ ಇಲ್ಲಸಲ್ಲದ ಆರೋಪ ಮಾಡಿರುವುದು ಸತ್ಯಕ್ಕೆ ದೂರವಾಗಿರುತ್ತದೆ.

3. ಸದರಿ ಸ್ಥಾವರದ ಹಿಂಬಾಕಿಯೂ ಗ್ರಾಹಕರಿಗೆ ಯಾವುದೇ ದಂಡದ ಮೊತ್ತವಾಗಿರದೇ ಮಾಪಕವು ದೋಷಪೂರಿತವಾಗಿದ್ದು, ಬಳಕೆ ದಾಖಲಾಗದೆ ಬಿಟ್ಟುಹೋಗಿದ್ದರಿಂದ, ಸರಾಸರಿ ಲೆಕ್ಕಾಚಾರ ಆಧರಿಸಿದ ವ್ಯತ್ಯಾಸದ ಬಿಲ್ಲು ಇರುವುದರಿಂದ ಕೆ.ಇ.ಆರ್.ಸಿ.. ನಿಯಮಾವಳಿ ಕಂಡಿಕೆ 29.03 ರ ಪ್ರಕಾರ ಸದರಿ ವ್ಯತ್ಯಾಸದ ಮೊತ್ತ ರೂ. 15500/-ಗಳನ್ನು ಗ್ರಾಹಕರು ತುಂಬಲು ಬಾಧ್ಯಸ್ಥರಿದ್ದು, ಈ ಕಚೇರಿ ಆದೇಶ ಸಂಖ್ಯೆ:ಹೆಸ್ಕಾಂ/ನ.ಉ.ವಿ-2/ಸ.ಕಾ.ನಿಂ(ವಿ)/ಸ.ಲಡ/ಹಿಸ/ಬಿ4/2022-23/1784-86 ದಿನಾಂಕ:22-07-2022 ರಡಿಯಲ್ಲಿ ಹೊರಡಿಸಿದ ಆದೇಶವನ್ನು ಎತ್ತಿ ಹಿಡಿಯಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ, ಸದರಿ ಪ್ರಕರಣದಲ್ಲಿ ಗ್ರಾಹಕರ ಇತಿಹಾಸವನ್ನು ಪರಿಶೀಲಿಸಲಾಗಿ ಜೂನ್-2017 ರಿಂದ ಎಪ್ರೀಲ್-2019 ರ ಅವಧಿಯಲ್ಲಿ ಮೀಟರ್ NORMAL ಎಂದು ಇರುತ್ತದೆ. ಹೀಗೆ ಇದ್ದಾಗಲೂ ಸಹ ಲೈಸನ್ಸುದಾರರು ಸದರಿ ಸ್ಥಾವರದ ಮೀಟರ್‌ನ್ನು ದಿನಾಂಕ:25-04-2019 ರಂದು ಬದಲಾವಣೆಗೊಳಿಸಿದ್ದು, ಸದರಿ ಮೀಟರ್‌ನ್ನು ಮಾಪಕ ಪರಿಶೀಲನಾ ಉಪ ವಿಭಾಗದಿಂದ ಪರಿಶೀಲನೆಗೆ ಒಳಪಡಿಸಿರುವುದ ಕಂಡು ಬಂದಿರುವುದಿಲ್ಲ. ಆದ್ದರಿಂದ ಲೈಸನ್ಸುದಾರರು ಕಳಚಿದ ಸದರಿ ಸ್ಥಾವರದ ಮೀಟರ್‌ನ್ನು ಮಾಪಕ ಪರಿಶೀಲನಾ ಉಪ ವಿಭಾಗದ ಪರೀಶಲನೆಗೆ ಒಳಪಡಿಸಿ, ಸದರಿ ಮ್ಟಿಟರ್ ಎಂ.ಎನ್.ಆರ್. ಆದ ಬಗ್ಗೆ ಖಚಿತಪಡಿಸಿಕೊಂಡು KERC, COS, Regulation 27.04 ಪ್ರಕಾರ ಸದರಿ ಸ್ಥಾವರಕ್ಕೆ ವಿಧಿಸಿರುವ ಕಂದಾಯ ಕೊರತೆ ಮೊತ್ತವನ್ನು ಗರೀಷ್ಠ 6 ತಿಂಗಳ ಅವಧಿಗೆ ಪರಿಷ್ಕರಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳು ಕ್ರಮ ಜರುಗಿಸಬೇಕಾಗುತ್ತದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-267/2022/**645-987 **ದಿನಾಂಕ:**02 DEC 2022

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ:06-07-2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ಮತ್ತು HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-2, ಹೆಸ್ಕಾಂ, ಹುಬ್ಬಳ್ಳಿರವರು ಸದರಿ ಸ್ಥಾವರದ ಕಳಚಿದ ಮಾಪಕವನ್ನು ಮಾಪಕ ಪರಿಶೀಲನಾ ಉಪ ವಿಭಾಗದವರಿಂದ ಪರಿಶೀಲನೆಗೆ ಒಳಪಡಿಸಿ, ಮಾಪಕ ಪರಿಶೀಲನಾ ಉಪ ವಿಭಾಗದ ವರದಿಯನ್ವಯ ಸದರಿ ಮಾಪಕವು ದೂಷಪೂರಿತ ಎಂದು ಕಂಡು ಬಂದಲ್ಲಿ KERC, COS, Regulation 27.04 ಪ್ರಕಾರ ಸದರಿ ಸ್ಥಾವರಕ್ಕೆ ವಿಧಿಸಿರುವ ಕಂದಾಯ ಕೊರತೆ ಮೊತ್ತವನ್ನು ಗರಿಷ್ಠ 6 ತಿಂಗಳ ಅವಧಿಗೆ ಪರಿಷ್ಕರಿಸಿ, ಗ್ರಾಹಕರಿಗೆ ಪರಿಷ್ಕೃತ ಬಿಲ್ಲನ್ನು ನೀಡಿ, ಪಾವತಿಸಿಕೊಳ್ಳುವ/ಹೊಂದಾಣಿಕೆ ಮಾಡಿಕೊಳ್ಳು ಕ್ರಮ ಜರುಗಿಸುವುದು.

(ರೇವಣಸಿದ್ದಪ್ಪ ಗವಣ್ಣವರ)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

(ಶ್ರೀಮತಿ ಲೀಲಾ ಆರ್ ಹಿರೇಮಠ)
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

(ಶ್ರೀಮತಿ ಶರಣಮ್ಮ ಎಸ್ ಜಂಗಿನ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

O/C

ಗೆ,
ಶ್ರೀಮತಿ ಶಿರೀನಬಾನು ಎಂ ಖಾಜಿ,
(R R No : 217664)
ಪ್ರೀಯದರ್ಶಿನಿ ಕಾಲೋನಿ,
ವಿಲ್ಲತ್ ನಗರ, ಮಂಟೂರ ರೋಡ, ಹುಬ್ಬಳ್ಳಿ.

ನೊಂದಾಯಿತ ಅಂಚೆ ACK

ಪ್ರತಿ:
1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.